# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 89/2020

P.W : 10
C.W: 22

**ದಿನಾಂಕ 13.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಜಯಣ್ಣ

**ತಂದೆಯ ಹೆಸರು** : ನಾಗಪ್ಪ

**ವಯಸ್ಸು** : 50 ವರ್ಷ

**ವೃತ್ತಿ** : ಹೋಟೆಲ್ ಕೆಲಸ

**ವಾಸಸ್ಥಳ** : ಚಿಕ್ಕಹಳ್ಳಿ

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಭಿ ಸಲಾಯಿತು.**

1. ಚಾ.ಸಾ.21 ವೆಂಕಟೇಶ ಗೊತ್ತಿಲ್ಲ. 4-5 ವರ್ಷದ ಹಿಂದೆ ನಾನು ಕ್ಯಾತ್ಸಂದ್ರ ಪೋಲೀಸ್ ಠಾಣೆಗೆ ಹೋಗಿದ್ದೆ. ಕ್ಯಾತಸಂದ್ರ ಪೋಲೀಸರು ನನ್ನನ್ನು ಠಾಣೆಗೆ ಬರುವಂತೆ ಕರೆದಿದ್ದರು. ಠಾಣೆಯಲ್ಲಿ ಪೋಲೀಸರು ಮತ್ತು ಇಬ್ಬರು ಹುಡುಗರು ಇದ್ದರು. ಪೋಲೀಸರು ತಮ್ಮ ಜೀಪಿನಲ್ಲಿ

ಇಬ್ಬರು ಹುಡುಗರನ್ನು ಕರೆದುಕೊಂಡು ಹೋಗಿದ್ದರು. ನಾನು ಸಹಾ ಜೀಪಿನಲ್ಲಿ ಹೋಗಿದ್ದೆ. ಪೋಲೀಸರು ನಾನು ಮತ್ತು ಆರೋಪಿಗಳಿಬ್ಬರೂ ಜೀಪಿನಲ್ಲಿ ಇಳಿದ ನಂತರ ರಸ್ತೆಯಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು. ಸ್ಥಳದಲ್ಲಿ ಪೋಲೀಸರು ಪೋಟೋ ತೆಗೆದರು. ಪೋಲೀಸರು ಸ್ಥಳದಲ್ಲಿ ಕೊಲೆಯಾಗಿತ್ತು ಎಂದು ಹೇಳಿದರು. ನಂತರ ಪೋಟೋ ತೆಗೆದರು. ಜೀಪಿನಲ್ಲಿ ನನ್ನೊಂದಿಗೆ ಬಂದ ಇಬ್ಬರು ಹುಡುಗರ ಪೊಟೋ ವನ್ನು ಪೋಲೀಸರು ತೆಗೆದರು. ಆಗ ಮಧ್ಯಾಹ್ನ 12.00 ಗಂಟೆ ಸಮಯ ಆಗಿತ್ತು. ಪೋಲೀಸರು ಪೋಟೋ ತೆಗೆದ ಮತ್ತು ಬರವಣಿಗೆ ಮಾಡಿದ ಸ್ಥಳದ ಹೆಸರು ಈಗ ನನಗೆ ನೆನಪಾಗುತ್ತಿಲ್ಲ. ಸಾಕ್ಷಿ ಪಂಚನಾಮೆ ಮತ್ತು ಸಹಿ ನೋಡಿ ಗುರುತಿಸಿದ್ದು ಪಂಚನಾಮೆ ನಿ.ಪಿ.14 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತು ಮಾಡಲಾಯಿತು. ಸಾಕ್ಷಿ ನಿ.ಪಿ.14 ರ ಮೊದಲ ಪುಟದ ಕ್ರಮ ಸಂಖ್ಯೆ 4 ರಲ್ಲಿ ಕಂಡು ಬರುವ ಪೊಟೋದ ಎಡಭಾಗದಿಂದ ಇರುವ ಬಿಳಿ ಶರ್ಟ್ ಹಾಕಿರುವ ಮೊದಲ ವ್ಯಕ್ತಿ ನಾನು ಎಂದು ನೋಡಿ ಗುರುತಿಸಿರುತ್ತಾರೆ.

2. ಕ್ಯಾತ್ಸಂದ್ರ ಪೋಲೀಸ್ ಠಾಣೆಯಿಂದ ಮುಂಭಾಗದಿಂದ ಹಾದು ಹೋಗುವ ರಸ್ತೆಯ ಮೂಲಕ ಒಂದು ಲೇಔಟ್ ನ ಬಳಿ ನಾನು ಪೋಲೀಸರೊಂದಿಗೆ ಜೀಪ್ ನಲ್ಲಿ ಹೋಗಿದ್ದೆ. ನಿ.ಪಿ.14 ರ ಸ್ಥಳಕ್ಕೆ ಹೋಗಿದ್ದ ಎಲ್ಲಾ ವ್ಯಕ್ತಿಗಳು ಸಹಾ ಜೀಪಿನಲ್ಲಿ ಲೇಔಟ್ ಗೆ ಹೋಗಿದ್ದವು.

ಲೇಔಟ್ ನ ಸ್ಥಳದಲ್ಲಿ ಫೋಟೋ ತೆಗೆದಿದ್ದರು. ಬರವಣಿಗೆ ಸಹಾ ಮಾಡಿದ್ದರು. ಒಂದು ಬಿಳಿಯ ಬಟ್ಟೆಯಲ್ಲಿ ಕೆಲವು ವಸ್ತುಗಳನ್ನು ಸ್ಥಳಕ್ಕೆ ಬಂದಿದ್ದರು. ಆದರೆ ಆ ಬಟ್ಟೆಯಲ್ಲಿದ್ದ ವಸ್ತುಗಳು ಯಾವುದು ಎಂದು ನನಗೆ ಗೊತ್ತಿಲ್ಲ. ಬಟ್ಟೆಯೊಂದಿಗೆ ಬೇರೆ ಯಾವ ವಸ್ತುಗಳು ಇತ್ತು ಎಂದು ನನಗೆ ಮರೆತು ಹೋಗಿರುತ್ತದೆ. ಫೋಟೋ ತೆಗೆದ ನಂತರ ಬರವಣಿಗೆ ಮಾಡಿ ನನ್ನ ಸಹಿ ಪಡೆದುಕೊಂಡರು. ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿ.ಪಿ.15 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತು ಮಾಡಲಾಯಿತು. ನಾನು ಸ್ಥಳದಲ್ಲಿ ನೋಡಿದ ಬಟ್ಟೆಗಳನ್ನು ಈಗ ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರಲಿಲ್ಲ, ಆದರೆ ದಾಖಲಾತಿಗೆ ಸಹಿ ಪಡೆದಿದ್ದರು.

*(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಲಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಸರ್ಕಾರಿ ಅಬಿಯೋಜಕರು ಬಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋದಾತ್ಮಕವಾಗಿ ಸಾಕ್ಷಿ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ*

*ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಬಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಜಿತ ಎಂದು ಮನಗಂಡು ಅನುಮತಿ ನೀಡಲಾಯಿತು)*

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರಿಂದಃ**

3. ನಾನು ಮತ್ತು ಚಾ.ಸಾ.21 ವೆಂಕಟೇಶ ದಿ.01.02.2020 ರಂದು ಮಹಜರ್ ಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿ. ಠಾಣೆಯಲ್ಲಿ ಹಾಜರಿದ್ದ ಇಬ್ಬರು ಹುಡುಗರು ತಮ್ಮ ಹೆಸರು ಭರತ್ ಮತ್ತು ಕಾಂತರಾಜು ಎಂದು ನನ್ನ ಮುಂದೆ ತಿಳಿಸಿದರು. ಇಬ್ಬರು ಹುಡುಗರು ನಮಗೆ ಮತ್ತು ಪೋಲೀಸರಿಗೆ ತಾವು ಕೊಲೆ ಮಾಡಿದ ಸ್ಥಳ ತೋರಿಸುತ್ತೇವೆ ಎಂದು ಹೇಳಿದ ನಂತರ ನಾವೆಲ್ಲರೂ ಆ ಇಬ್ಬರು ಹುಡುಗರೊಂದಿಗೆ ಪೋಲೀಸ್ ಜೀಪ್ ನಲ್ಲಿ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಇಬ್ಬರು ಹುಡುಗರು ಕೊಲೆಯಾದ ಸ್ಥಳವನ್ನು ನಮಗೆ ಮತ್ತು ಪೋಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ. ಆ ಇಬ್ಬರು ಹುಡುಗರು ಮಾರನಾಯಕನಪಾಳ್ಯ ದ ಪ್ರೇಮ್ ಕುಮಾರ್ ರವರ ಮನೆಯ ಮುಂದಿನ ಸೇತುವೆ ಬಳಿ ಟಾರ್ ರಸ್ತೆಯಲ್ಲಿ ಕೊಲೆ ಮಾಡಿದ್ದು ಎಂದು ನನಗೆ ಮತ್ತು ಪೋಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ. ಸಿ.ಡಿಯನ್ನು ತೆರೆದ ನ್ಯಾಯಾಲಯದಲ್ಲಿ ಸಿ.ಡಿ ಡ್ರೈವ್ ಮೂಲಕ ಪ್ಲೇ ಮಾಡಿದ ನಂತರ ಸಾಕ್ಷಿ ಒಂದು ಪೋಟೋವನ್ನು ನೋಡಿ ಗುರುತಿಸಿದ್ದು ಸದರಿ

ಪೋಟೋದಲ್ಲಿ ತಾನು ಇರುವುದಾಗಿ ನುಡಿದಿರುತ್ತಾರೆ. ಸದರಿ ಪೋಟೋದಲ್ಲಿ ಬಟ್ಟೆ ಸಹ ಇರುವುದಾಗಿ ನುಡಿದಿರುತ್ತಾರೆ. ಸದರಿ ಸಿ.ಡಿ. ಯನ್ನು ನಿ.ಪಿ.16 ಎಂದು ಗುರುತು ಮಾಡಲಾಯಿತು. ಕೊಲೆಯಾದ ಸ್ಥಳ ಎಂದು ಇಬ್ಬರು ಹುಡುಗರು ತೋರಿಸಿದ ನಂತರ ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿ. ನಾನು ಸದರಿ ಸ್ಥಳದಲ್ಲಿ ಮಹಜರ್ ಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 11.45 ರಿಂದ 12.45 ರ ಸಮಯದಲ್ಲಿ ಮಾಡಿದ್ದರು ಎಂದರೆ ಸರಿ.

ಈ ಹಂತದಲ್ಲಿ ನಿ.ಪಿ.14 ಸಿಡಿಯಲ್ಲಿ ವಿಡಿಯೋ ಗಳು ಪ್ಲೇ ಆಗದೇ ಇರುವ ಕಾರಣ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.